ಗೌರವಾನ್ವಿತ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಳವಳ್ಳಿ

**ಅಸಲು ದಾವಾ ಸಂಖ್ಯೆ: 32/2018**

ವಾದಿ : ರಾಮಲಿಂಗೇಗೌಡ

ವಿರುದ್ದ

ಪ್ರತಿವಾದಿಗಳು : ಬಸವೇಗೌಡ, ಮೃತರು ಇವರ ವಾರಸುದಾರರು ಬಸವರಾಜು ಮತ್ತು ಇತರರು

DW1

**ಆಜ್ಞೆ 18 ನಿಯಮ 4 ಸಿ.ಪಿ.ಸಿ. ರೀತ್ಯಾ 4ನೇ ಪ್ರತಿವಾದಿಯ ಮುಖ್ಯ ಸಾಕ್ಷಿಯ ವಿಚಾರಣೆ ಪ್ರಮಾಣ ಪತ್ರ**

ಹೆಸರು : ಕುಮಾರ್

ತಂದೆ ಹೆಸರು : ಲೇಟ್ ಬಸವೇಗೌಡ

ವಯಸ್ಸು : ಸುಮಾರು 40 ವರ್ಷ

ವೃತ್ತಿ : ನೌಕರ

ವಾಸ : ನಂದೀಪುರ ಗ್ರಾಮ, ಹಲಗೂರು ಹೋಬಳಿ, ಮಳವಳ್ಳಿ ತಾಲ್ಲೂಕು

ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುವ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿ ಹೇಳುವುದೇನೆಂದರೆ,

ಪ್ರಸ್ತುತ ದಾವೆಯನ್ನು ವಾದಿಯು ನಮ್ಮಗಳ ವಿರುದ್ದ ನಿರ್ಧಿಷ್ಟ ಕ್ರಯದ ಕರಾರು ಪತ್ರದಡಿಯಲ್ಲಿ ನಮ್ಮಗಳ ಮೇಲೆ ದಾವೆಯನ್ನು ಮಾಡಿರುತ್ತಾರೆ. ಸದರಿ ದಾವೆ ವಾದಿಯು ದಿನಾಂಕ: 13-08-2015 ರಂದು ವಾದಿಯವರಿಗೆ

NOTARY M. BASAVARAJU Area MALAVALLI Revenue Taluk Reg. No. Law 44 LCL99 Expiry: 5-4-2027 GOVT. OF KARNATAKA

Kumar

ನಾನು ಮತ್ತು ನನ್ನ ತಂದೆ ಮೃತ ಬಸವೇಗೌಡ ಮತ್ತು ನನ್ನ ಅಣ್ಣಂದಿರು ಎಲ್ಲರೂ ಸೇರಿ ಬರೆಸಿದ ಕ್ರಯದ ಕರಾರು ಪತ್ರ ಸಂಬಂಧಿ ಈ ದಾವೆಯನ್ನು ನಮ್ಮಗಳ ವಿರುದ್ಧ ಸಲ್ಲಿಸಿರುತ್ತಾರೆ.

ವಾದಿಯು ನಮಗೆ ಈಗ್ಗೆ ಸುಮಾರು 2015 ರಲ್ಲಿ ಪರಿಚಯವಿರುತ್ತಾರೆ. ಸದರಿಯವರು ವಿ.ಆರ್.ದೊಡ್ಡಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ವಿಳಾಸಕ್ಕೆ ಸೇರಿದವರು, ಅವರು ನಮ್ಮ ಪಕ್ಕದ ಗ್ರಾಮದ ಹಲಗೂರು ಗ್ರಾಮದ ಸುತ್ತಮುತ್ತಲ ಜನಗಳಿಗೆ ಪರಿಚಯಸ್ಥ ರಾಗಿದ್ದು, ಅವರು ಹಲವು ಜನರಿಗೆ ಹಣಕಾಸಿನ ವ್ಯವಹಾರವನ್ನು ಮಾಡುತ್ತಿದ್ದರೂ ಅಂದರೆ ಬಡ್ಡಿ ಲೇವಾದೇವಿಯನ್ನು ನಡೆಸುತ್ತಿದ್ದರು, ನಮಗೆ ಪರಿಚಯ ವಿದ್ದ ವ್ಯಕ್ತಿಯು ನಮಗೆ ಹಣ ಅವಶ್ಯಕತೆ ಇದ್ದು ನಮ್ಮನ್ನು ಅವರ ಬಳಿ ಕರೆದುಕೊಂಡು ಹೋಗಿ ಕೈ ಸಾಲ ಕೊಡುವಂತೆ ಅವರನ್ನು ನಾನು ಮತ್ತು ನನ್ನ ತಂದೆ ಮೃತ ಬಸವೇಗೌಡ ಇಬ್ಬರೂ ಕೇಳಿದಾಗ ವಾದಿಯು ಸಾಲದ ಭದ್ರತೆಗಾಗಿ ಜಮೀನನ್ನು ಕರಾರು ಪತ್ರ ಬರೆದುಕೊಡುವಂತೆ ನಮಗೆ ತಿಳಿಸ ಲಾಗಿ ನಾನು ಮತ್ತು ನನ್ನ ತಂದೆ ಮೃತ ಬಸವೇಗೌಡ ಹಾಗೂ ನನ್ನ ಅಣ್ಣಂದಿರು ಎಲ್ಲರೂ ಸೇರಿ ಕೈ ಸಾಲದ ಹಣದ ಭದ್ರತೆಗಾಗಿ ದಿನಾಂಕ: 13-08-2015 ರಂದು ಮಳವಳ್ಳಿ ಸಬ್ ರಿಜಿಸ್ಟರ್ ಆಫೀಸಿನಲ್ಲಿ ಮಳವಳ್ಳಿ ತಾಲ್ಲೂಕು, ಹಲಗೂರು ಹೋಬಳಿ, ನಂದೀಪುರ ಗ್ರಾಮದ ಸರ್ವೆ ನಂ.47/1ಬಿ ರ ವಿಸ್ತೀರ್ಣ 0-31 ಗುಂಟೆ ಜಮೀನನ್ನು ಕ್ರಯದ ಕರಾರು ಪತ್ರವನ್ನು ಬರೆದು ಕೊಟ್ಟು ಸದರಿ ಪತ್ರದ ಬರೆದ ಸಮಯದಲ್ಲಿ ವಾದಿಯಿಂದ ರೂ.4,00,000/- ಗಳನ್ನು ಮಾಹೆಯಾನ ರೂ.1% ಬಡ್ಡಿಯಂತೆ ಮೂರು ವರ್ಷಗಳ ಅವಧಿಗೆ ಪತ್ರವನ್ನು ಬರೆದುಕೊಟ್ಟಿರುತ್ತೇವೆ. ಸದರಿ ಪತ್ರ ಬರೆದ ದಿನಾಂಕದಿಂದ ಪ್ರತಿ ತಿಂಗಳು ರೂ.4,000-00 ಗಳ ಬಡ್ಡಿಯನ್ನು ಸುಮಾರು ಎರಡುವರೆ ವರ್ಷಗಳ ಕಾಲ ಕಟ್ಟಿಕೊಂಡು ಬಂದಿರುತ್ತೇವೆ. ತದನಂತರ ವಾದಿಯು ಅಸಲು ಹಣ ರೂ.4,00,000-00 ಗಳನ್ನು ಕೊಡುವಂತೆ ಕೇಳಿದಾಗ ಆ ಸಮಯದಲ್ಲಿ ಹಣವನ್ನು ಕೊಡಲು ನಾವು ವಾದಿಯವರಿಗೆ ಕಾಲಾವಕಾಶ

NOTARY M. BASAVARAJ Area MALAVALLI Revenue Taluk Reg. No. Law 4 LOL 99 Expiry: 5-4-2023 GOVT. OF KARNATAKA

Kumar B.

ಕೇಳಿದೆವು ಆದರೆ ವಾದಿ ಯಾವುದೇ ಕಾಲಾವಕಾಶವನ್ನು ನೀಡದೆ ನಮ್ಮಗಳಿಗೆ ವಕೀಲರ ಮೂಲಕ ನೋಟಿಸ್‌ನ್ನು ನೀಡಿರುತ್ತಾರೆ. ಸದರಿ ನೋಟಿಸಿಗೆ ಪ್ರತ್ಯುತ್ತರ ನೋಟಿಸ್ ಸಹ ನೀಡಿರುತ್ತೇವೆ. ಪ್ರತಿವಾದಿಗಳಾದ ನಮಗೆ ಸದರಿ ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತವಾದ ಆಸ್ತಿಯಾಗಿದ್ದು, ನಮ್ಮ ಕುಟುಂಬದ ಜೀವನೋಪಾಯಕ್ಕೆ ಇರುವಂತಹ ಏಕೈಕ ಜಮೀನಾಗಿರುತ್ತದೆ. ಇದನ್ನು ಹೊರತುಪಡಿಸಿ ನಮ್ಮಗಳಿಗೆ ಯಾವುದೇ ಕೃಷಿ ಜಮೀನು ಇರುವುದಿಲ್ಲ. ಸದರಿ ಜಮೀನಿನಲ್ಲಿ ನಾವುಗಳು ಈಗಾಗಲೇ ರೇಷ್ಮೆ ಬೆಳೆ ಬೆಳೆದು ಜೀವನ ಮಾಡುತ್ತಿದ್ದು, ಲಕ್ಷಾಂತರ ಬೆಲೆ ಬಾಳುವ ಜಮೀನಾಗಿರುತ್ತದೆ. ಸದರಿ ಜಮೀನನ್ನು ಲಪಟಾಯಿಸುವ ದುರುದ್ದೇಶವನ್ನು ವಾದಿಯು ಹೊಂದಿ ನಮ್ಮಗಳ ವಿರುದ್ಧ ಈ ಒಂದು ಸುಳ್ಳು ದಾವೆಯನ್ನು ತಂದಿರುತ್ತಾರೆ.

ನಾವುಗಳು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ವಾದಿಯು ನಮಗೆ ನೀಡಿರುವ ಕೈ ಸಾಲದ ಹಣ ರೂ.4,00,000–00 ಗಳಿಗೆ ದಾವೆ ಹೂಡುವವರೆಗೂ ಬಡ್ಡಿ ಪಾವತಿಸಿರುತ್ತೇವೆ.ಆದ್ದರಿಂದ ಘನ ನ್ಯಾಯಾಲಯವು ವಾದಿಯು ನೀಡಿರುವ ರೂ.4,00,000–00 ಮತ್ತು ದಾವೆ ಹೂಡಿದ ನಂತರದಿಂದ ಶೇ.1% ಬಡ್ಡಿಯನ್ನು ಈ ತಹಲ್‌ವರೆಗೂ ಆಗುವ ಬಡ್ಡಿಯನ್ನು ವಾದಿಗೆ ಮರುಪಾವತಿ ಮಾಡಲು ನಾವುಗಳು ಬದ್ಧರಾಗಿರುತ್ತೇವೆ.

ಆದ್ದರಿಂದ ಘನ ನ್ಯಾಯಾಲಯವು ವಾದಿಯು ತಂದಿರುವ ದಾವೆಯಲ್ಲಿ ಕೋರಿರುವಂತೆ ಯಾವುದೇ ಪರಿಹಾರ ಹೊಂದಲು ವಾದಿಯು ಅರ್ಹರಾಗಿರುವುದಿಲ್ಲ. ಆದ್ದರಿಂದ ವಾದಿಯು ತಂದಿರುವ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಬೇಕಾಗಿ ಘನ ನ್ಯಾಯಾಲಯದಲ್ಲಿ ಪ್ರಾರ್ಥನೆ. ನಾವುಗಳು ಘನ ನ್ಯಾಯಲಯಕ್ಕೆ ನಮ್ಮ ಪರ ಸಲ್ಲಿಸಿರುವ ದಾಖಲಾತಿಗಳನ್ನು ನಮ್ಮಗಳ ಪರ ಡಿ. ನಿಶಾನೆಗಳನ್ನಾಗಿ ಗುರುತಿಸಿಕೊಳ್ಳಬೇಕಾಗಿ ಪ್ರಾರ್ಥನೆ.

NOTARY
M. BASAVARAJU
Area MALAVALLI
Revenue Taluk
Reg. No. Law 44
LCL 99
Expiry: 5-4-2027
GOVT. OF KARNATAKA

Kumar B.

ಮೇಲೆ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

ಗುರ್ತಿಸುವ ವಕೀಲರು

ಪ್ರಮಾಣೀಕರಿಸುವವರು

ದಿನಾಂಕ: 16–06–2026

NOTARY
M. BASAVARAJU
Area MALAVALLI
Revenue Taluk
Reg. No. Law 42
LC: 99
Expiry: 5-4-2027
GOVT. OF KARNATAKA

SWORN TO BEFORE ME
16/6/26
M BASAVARAJU
B.A., L.L.B
ADVOCATE & NOTARY
Malavalli 571 430
Mandya Dist